## ಯೋಜನಾ ಸಂಯೋಜಕರ ಹುದ್ದೆಗೆ ಆಹ್ವಾನ

**ಹುದ್ದೆ: ಯೋಜನಾ ಸಂಯೋಜನರು– 1**

**ವಿವರಣೆ:**

ಮುರಾರ್ಜಿ ದೇಸಾಯಿ ವಸತಿ ಶಾಲೆ, ಬಿ.ಸಿ.ಎಂ ಹಾಸ್ಟೆಲ್, ಬಾಲ ಮಂದಿರಗಳು ಹಾಗೂ ಇನ್ನಿತರೆ ವಸತಿ ನಿಲಯಗಳಲ್ಲಿನ ಮಕ್ಕಳ ವಿಕಾಸಕ್ಕಾಗಿ ಕಾಲೇಜು ಹಾಗೂ ಸಮುದಾಯದಲ್ಲಿನ ಯುವಜನರನ್ನು ಸ್ವಯಂ ಸೇವಕರನ್ನು ತೊಡಗಿಸಿಕೊಂಡು ಕೆಲಸ ಮಾಡಬಲ್ಲ ಅರ್ಹ ಯುವ ವೃತ್ತಿಪರರ ಅವಶ್ಯಕತೆ ಇದೆ.

**ಜವಾಬ್ದಾರಿಗಳು**

- ಸರ್ಕಾರದ ವಿವಿಧ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ನಿಲಯಗಳಲ್ಲಿನ ಮಕ್ಕಳ ವಿಕಾಸಕ್ಕೆ ಅಗತ್ಯವಾದ ಕಾರ್ಯಚಟುವಟಿಕೆಗಳನ್ನು ಯೋಜಿಸುವುದು.
- ಕಾರ್ಯಕ್ಷೇತ್ರದಲ್ಲಿ ಅನುಷ್ಠಾನಮಾಡಬೇಕಾದ ಕಾರ್ಯ ಚಟುವಟಿಕೆಗಳ ವಾರ್ಷಿಕ ಯೋಜನೆ ತಯಾರಿಸುವುದು ಹಾಗೂ ಸದರಿ ಯೋಜನೆಯ ಪರಿಣಾಮಕಾರಿ ಅನುಷ್ಠಾನದಲ್ಲಿ ತಂಡದ ಸದಸ್ಯರ ಜೊತೆಗೂಡಿ ಕಾರ್ಯನಿರ್ವಹಿಸುವುದು.
- ಯೋಜಿಸಲಾದ ಚಟುವಟಿಕೆಗಳನ್ನು ಆಯಾ ಜಿಲ್ಲಾ ತಂಡದ ಜೊತೆ ಸೇರಿ ಪರಿಣಾಮಕಾರಿಯಾಗಿ ಅನುಷ್ಠಾನಮಾಡುವುದು ಮತ್ತು ಮೇಲುಸ್ತುವಾರಿ ನಡೆಸುವುದು.
- ಕಾರ್ಯಕ್ಷೇತ್ರಕ್ಕೆ ನಿಗದಿತವಾಗಿ ಬೇಟಿನೀಡಿ ಕಾರ್ಯಕ್ರಮ ಅನುಷ್ಠಾನದ ಗುಣಮಟ್ಟ ಪರಿಶೀಲನೆ ನಡೆಸುವುದು, ಅದಕ್ಕೆ ಸಂಬಂಧಿಸಿದಂತೆ ಜಿಲ್ಲಾ ತಂಡದ ಮುಂದಾಳುಗಳಿಗೆ ಹಿಮ್ಮಾಹಿತಿ ನೀಡುವುದು.
- ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಮಾಡಲು ಸ್ವಯಂ ಸೇವಕರಿಗೆ ಪ್ರೇರಣೆ ನೀಡುವುದು ಹಾಗೂ ಸದ್ಯ ತೊಡಗಿಸಿಕೊಂಡಿರುವವರಿಗೆ ಉತ್ತೇಜನ ನೀಡುವುದು.
- ಕಾರ್ಯಕ್ರಮದ ಪರಿಣಾಮವನ್ನು ಅಳೆಯಲು ಅಗತ್ಯವಾದ ಯೋಜನೆ ರೂಪಿಸುವುದು ಮತ್ತು ಪರಿಣಾಮ ವರದಿ ಸಿದ್ಧಪಡಿಸುವುದು.
- ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಸರ್ಕಾರಿ ಅಧಿಕಾರಿಗಳ ಜೊತೆಗೆ ಹೊಂದಾಣಿಕೆಯಿಂದ ಕೆಲಸ ಮಾಡುವುದು.
- ಸಂದರ್ಭಾನುಸಾರ ಕಾರ್ಯಕ್ರಮದಲ್ಲಿನ ಬದಲಾವಣೆಗಳಿಗೆ ಹೊಂದಿಕೊಂಡು ಕಾರ್ಯನಿರ್ವಹಿಸುವುದು.

**ವರದಿ ಮಾಡುವಿಕೆ**

- ಕಾರ್ಯಕ್ಷೇತ್ರದಲ್ಲಿನ ವಿದ್ಯಮಾನಗಳನ್ನು ವರದಿ ರಚನೆಮಾಡುವುದು, ನಿಗದಿತ ಸಭೆಗಳಲ್ಲಿ ಯೋಜನಾ ಮುಖ್ಯಸ್ಥರಿಗೆ ವರದಿ ಸಲ್ಲಿಸುವುದು.
- ಪ್ರಗತಿ ಪರಿಶೀಲನಾ ಸಭೆಗಳಲ್ಲಿ ವರದಿ ಮಂಡನೆ ಮಾಡುವುದು.
- ಸದರಿ ವರದಿಯನ್ನು ಯೋಜನೆಯ ಎಲ್ಲಾ ಭಾಗಿದಾರರಿಗೆ ತಲುಪಿಸುವುದು.

**ಆಯ್ಕೆಯ ಮಾನದಂಡಗಳು**

| | |
|---|---|
| ವಯಸ್ಸು | 25 ರಿಂದ 35 ರ ಒಳಗಿರಬೇಕು |
| ಶಿಕ್ಷಣ | ಸಮಾಜಕಾರ್ಯದಲ್ಲಿ ಸ್ನಾತ್ತಕೋತ್ತರ ಪದವಿ |
| ಅನುಭವ | 3 ರಿಂದ 5 ವರ್ಷ ಶಿಕ್ಷಣ ಕ್ಷೇತ್ರದಲ್ಲಿ ಗ್ರಾಮೀಣ ಭಾಗದಲ್ಲಿ ಕೆಲಸ ಮಾಡಿದ ಅನುಭವ |
| ಭಾಷೆ | ಕನ್ನಡ ಮತ್ತು ಇಂಗ್ಲೀಷ್ |
| ಕೌಶಲ್ಯ | • ಉತ್ತಮ ಸಂವಹನ<br>• ಸರ್ಕಾರಿ ಅಧಿಕಾರಿಗಳೊಂದಿಗೆ ಕೆಲಸ ಮಾಡುವುದು<br>• ಕಂಪ್ಯೂಟರ್ ಬಳಕೆ (ವರ್ಡ್, ಎಕ್ಸೆಲ್ ಮತ್ತು ಪಿಪಿಟಿ)<br>• ಮಕ್ಕಳು ಮತ್ತು ಯುವಜನರೊಂದಿಗೆ ಕಾರ್ಯನಿರ್ವಹಿಸುವ, ಉತ್ತೇಜಿಸುವ ಕೌಶಲ್ಯ |
| ಕೆಲಸ ಮಾಡಬೇಕಾದ ಸ್ಥಳಗಳು | • ಬೆಂಗಳೂರು ಕೇಂದ್ರ ಸ್ಥಾನ.<br>• ಕರ್ನಾಟಕದ ಐದಾರು ಜಿಲ್ಲೆಗಳಿಗೆ ನಿಗದಿತವಾಗಿ ಸಂಚಾರ ಮಾಡಬೇಕಾಗುತ್ತದೆ. |
| ಇತರೆ ಅಗತ್ಯಗಳು | • ಬೆಂಗಳೂರಿನಲ್ಲಿ ವಾಸವಿರುವುದು ಆದ್ಯತೆ.<br>• ನಾಯಕತ್ವ ತೆಗೆದುಕೊಳ್ಳುವ ಹಾಗೂ ಸ್ವತಂತ್ರವಾಗಿ ಯೋಜನೆ ರೂಪಿಸುವ ಕೌಶಲ್ಯ<br>• ಈಗಾಗಲೇ ಸರ್ಕಾರಿ ಇಲಾಖೆಗಳ ಜೊತೆಗೂಡಿ ಕೆಲಸ ಮಾಡಿದ ಅನುಭವವಿದ್ದರೆ ಆದ್ಯತೆ ನೀಡಲಾಗುವುದು. |